ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಚಿಕ್ಕಮಗಳೂರು

**<u>ಸೆಷನ್ಸ್ ಕೇಸ್ ನಂ.150/2023</u>**

| | |
|---|---|
| ಫಿರ್ಯಾದುದಾರರು | ರಾಜ್ಯದ ಪರವಾಗಿ ಬಾಳೂರು ಪೋಲೀಸ್. |

ವಿರುದ್ಧ

| | |
|---|---|
| ಆರೋಪಿ | ಅನಿಲ್ ಆಚಾರ್ ಕೆ. ಮತ್ತು ಇನ್ನೊಬ್ಬ. |

<u>ದೋಷಾರೋಪಣೆ</u>

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಎಂ., ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಚಿಕ್ಕಮಗಳೂರು ಆದ ನಾನು, ಈ ಕೆಳಕಂಡ ಆರೋಪಿತರಾದಃ-

1. ಅನಿಲ್ ಆಚಾರ್ ಕೆ, ಬಿನ್ ಲೇಟ್ ಕಾಳಾಚಾರ್, ವಯಸ್ಸು 38 ವರ್ಷ, ಕಾರಪೆಂಟರ್, ವಾಸಃ ದೇವನಗೂಲ್ ಗ್ರಾಮ, ಕೊಟ್ಟಿಗೆಹಾರ ಅಂಚೆ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು. ಖಾಯಂ ವಿಚಾಸಃ ದೇವನಗೂಲ್ ತರುವೆ ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು.
2. ಪೂರ್ಣೇಶ್ ಬಿನ್ ಲೇಟ್ ಕಾಳಾಚಾರ್, ವಯಸ್ಸು 20 ವರ್ಷ, ವಾಸಃ ದೇವನಗೂಲ್ ತರುವೆ ಗ್ರಾಮ, ಬಾಳೂರು ಹೋಬಳಿ, ಮೂಡಿಗೆರೆ ತಾಲ್ಲೂಕು.

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕಃ15-6-2023 ರಂದು ಚಾಸಾ-1 ಜೆಸಿಂತಾ ಡೆಸಾ ರವರು ಕೈ ನೋವಿದ್ದ ಕಾರಣ ಹಾಸನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಹೋದವರು, ಅದೇ ದಿನ ರಾತ್ರಿ ಸುಮಾರು 8-00 ಗಂಟೆಗೆ ಮರಳಿ ಅವರ ಊರಾದ ಜಾವಳಿ ಗ್ರಾಮಕ್ಕೆ ಹೋಗಲು ಹಾಸನದಿಂದ

ಕೊಟ್ಟಿಗೆಹಾರಕ್ಕೆ ಬಂದು ಕೊಟ್ಟಿಗೆಹಾರದಿಂದ ಬಾಳೂರು ಕಡೆಗೆ ಹೋಗುವ ರಸ್ತೆ ಬದಿಯಲ್ಲಿ ಬಸ್ಸಿಗೆ ಕಾಯುತ್ತಾ ನಿಂತಿರುವಾಗ, ರಾತ್ರಿ 9-30 ಗಂಟೆಗೆ ಕೊಟ್ಟಿಗೆಹಾರದ ಕಡೆಯಿಂದ ಬಾಳೂರು ಕಡೆಗೆ ಹೋಗಲು 1 ನೇ ಆರೋಪಿತರಾದ ನೀವು ಮಾರುತಿ 800 ಕಾರ್ ನಂ.ಕೆಎ.05/ಜಡ್.6075 ರಲ್ಲಿ 2 ನೇ ಆರೋಪಿತರಾದ ನಿಮ್ಮೊಂದಿಗೆ ಬಂದು, ಚಾಸಾ-1 ರವರಿಗೆ ಎಲ್ಲಿ ಹೋಗಬೇಕು, ನಾವು ಜಾವಳಿ ಕಡೆಗೆ ಹೋಗುತ್ತೇವೆ ಬನ್ನಿ ಎಂದು ಹೇಳಿ ಚಾಸಾ-1 ರವರನ್ನು ಕಾರಿನ ಹಿಂಭಾಗದ ಸೀಟಿನಲ್ಲಿ ಕೂರಿಸಿಕೊಂಡು ಬಾಳೂರು ಕಡೆಗೆ ಕಾರನ್ನು ಚಾಲನೆ ಮಾಡಿಕೊಂಡು ಹೋಗಿದ್ದು, ರಾತ್ರಿ 10-00 ಗಂಟೆ ಸಮಯದಲ್ಲಿ ಬಾಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಮೂಡಿಗೆರೆ ತಾಲ್ಲೂಕು ಬಾಳೂರು ಗ್ರಾಮದ ಚರ್ಚ್ ಬಳಿ ಬಾಳೂರು ಕಡೆಯಿಂದ ಜಾವಳಿ ಕಡೆಗೆ ಹೋಗುವ ರಸ್ತೆಯ ಬದಿಯಲ್ಲಿ ಕಾರನ್ನು ನಿಲ್ಲಿಸಿ, ನೀವಿಬ್ಬರೂ ಚಾಸಾ-1 ರವರೊಂದಿಗೆ ಅತ್ಯಾಚಾರ ಮಾಡುವ ಸಮಾನ ಉದ್ದೇಶದಿಂದ ಕಾರಿನಿಂದ ಇಳಿದು ಬಂದು, 1 ನೇ ಆರೋಪಿತರಾದ ನೀವು ಚಾಸಾ-1 ರವರ ಕೈ ಹಿಡಿದು ಬಲವಂತವಾಗಿ ಕಾರಿನಿಂದ ಹೊರಗೆ ಎಳೆದಾಗ ಚಾಸಾ-1 ರವರು ಕಾರಿನಿಂದ ಕೆಳಗೆ ಬಿದ್ದಿದ್ದು, ಆಗ 2 ನೇ ಆರೋಪಿತರಾದ ನೀವು ಚಾಸಾ-1 ರವರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಾಗ, 1 ನೇ ಆರೋಪಿತರಾದ ನೀವು ಚಾಸಾ-1 ರವರ ಒಳ ಉಡುಪನ್ನು ಕೆಳಗೆ ಜಾರಿಸಿ ಕೈಯಿಂದ ಅವರ ಮರ್ಮಾಂಗವನ್ನು ಮುಟ್ಟಿ ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಆ ಮೂಲಕ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಅಪರಾಧ ಮಾಡುವ ಏಕೋದ್ದೇಶದಿಂದ ಸೇರಿಕೊಂಡು, ಮೇಲ್ಕಂಡ ಘಟನೆಗೆ ಮುಂದುವರೆದು, 2 ನೇ ಆರೋಪಿತರಾದ ನೀವು ನಿಮ್ಮ ಶಿಶ್ನವನ್ನು ಚಾಸಾ-1 ರವರ ಬಾಯಿಗೆ ಇಟ್ಟಿದ್ದು, ರಸ್ತೆಯಲ್ಲಿ ಯಾವುದೋ ವಾಹನ ಬಂದಾಗ ಚಾಸಾ-1 ರವರು ತನ್ನ ಮಗ ಬಂದನೆಂದು ಕೂಗಿಕೊಂಡಾಗ, ನೀವಿಬ್ಬರೂ ಚಾಸಾ-1 ರವರನ್ನು ಸ್ಥಳದಲ್ಲಿಯೇ ಬಿಟ್ಟು ಕಾರಿನ

ಸಮೇತ ಪರಾರಿಯಾಗಿದ್ದು, ಆ ಮೂಲಕ 1 ಮತ್ತು 2 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 376 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು 1 ಮತ್ತು 2 ನೇ ಅರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 6 ನೇ ದಿವಸ ಆಗಸ್ಟ್ ಮಾಹೆಯ 2025 ನೇ ಇಸವಿಯಂದು.

ಸಹಿ

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**1 ನೇ ಆರೋಪಿ -ಅನಿಲ್ ಆಚಾರ್ ಕೆ, ಬಿನ್ ಲೇಟ್ ಕಾಳಾಚಾರ್ಃ**

ಆರೋಪಿಯ ಆಪಾದನೆ

ಪ್ರಶ್ನೆ-1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:
ತಿಳಿಯಿತು

ಪ್ರಶ್ನೆ-2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ . ವಿಚಾರಣೆಯಾಗಬೇಕು

(ದಿನಾಂಕ 16 ನೇ ದಿವಸ ಏಪ್ರಿಲ್ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
(ರಾಜೇಶ್ವರಿ ಎನ್. ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.

**2 ನೇ ಆರೋಪಿ -ಪೂರ್ಣೇಶ್ ಬಿನ್ ಲೇಟ್ ಕಾಳಾಚಾರ್ಃ**

**ಆರೋಪಿಯ ಆಪಾದನೆ**

ಪ್ರಶ್ನೆ-1: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:ತಿಳಿಯಿತು

ಪ್ರಶ್ನೆ-2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ: ತಪ್ಪು ಮಾಡಿಲ್ಲ . ವಿಚಾರಣೆಯಾಗಬೇಕು

(ದಿನಾಂಕ 16 ನೇ ದಿವಸ ಏಪ್ರಿಲ್ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

ಸಹಿ
**(ರಾಜೇಶ್ವರಿ ಎನ್. ಹೆಗಡೆ )**
ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಚಿಕ್ಕಮಗಳೂರು.